Sri R.V. Deshpande :- We have no intentions to stop the Bill .....

(ಗೊಂದಲ)

ಶ್ರೀ ಆರ್.ವಿ. ದೇಶಪಾಂಡೆ :- ಈ ಸರ್ಕಾರಕ್ಕೆ ರೂಲ್ಸ್, ರೆಗ್ಯುಲೇಷನ್ಸ್ ಏನೂ ಇಲ್ಲ. ಅಪೋಸಿಷನ್‌ನವರಿಗೆ ಯಾವುದಕ್ಕೂ ಅವಕಾಶವನ್ನು ಕೊಡದೇ ಇರುವುದರಿಂದ ನಾವು ಬಹಳ ವಿಷಾದದಿಂದ ಪ್ರೊಟೆಸ್ಟ್ ಮಾಡುತ್ತಿದ್ದೇವೆ. Government is taking it very casually.

(INTERRUPTIONS)

ಶ್ರೀ ಎಂ. ವೀರಪ್ಪ ಮೊಯ್ಲಿ :- ಈಗ ನಿಮ್ಮ ಬಣ್ಣ ಬಯಲಾಯಿತು. ಜಿಲ್ಲಾ ಪರಿಷತ್ತಿನ ಚುನಾವಣೆಯನ್ನು ಎದುರಿಸುವುದಕ್ಕೆ ನೀವು ಸಿದ್ಧರಾಗಿಲ್ಲ. You are running away from the Elections. You are running away from the people.

(ಗೊಂದಲ)

Sri M.Y. Ghorpade :- You stand exposed.

ಶ್ರೀ ಎಂ. ವೀರಪ್ಪ ಮೊಯ್ಲಿ :- ಚುನಾವಣೆಯನ್ನು ಎದುರಿಸುವುದಕ್ಕೆ ಧೈರ್ಯವಿಲ್ಲದೆ ಓಡಾಡುತ್ತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :- ಜಿಲ್ಲಾ ಪರಿಷತ್ತಿನ ಚುನಾವಣೆಯನ್ನು ನಡೆಸುವುದಕ್ಕೆ ಸರ್ಕಾರಕ್ಕೆ ಕಳಕಳಿ ಇಲ್ಲ. ನೀತಿ ನಿಯಮಗಳನ್ನೆಲ್ಲಾ ಗ್ಗಾಳಿಗೆ ತೂರುತ್ತಿದ್ದೀರಿ.

(ಗೊಂದಲ)

(ಈ ಹಂತದಲ್ಲಿ ವಿರೋಧ ಪಕ್ಷದ ಎಲ್ಲಾ ಮಾನ್ಯ ಸದಸ್ಯರುಗಳೂ ಸಭಾತ್ಯಾಗ ಮಾಡಿದರು.)

ಶ್ರೀ ಎಂ. ವೀರಪ್ಪಮೊಯಿಲಿ:- ವಿರೋಧಪಕ್ಷದ ನಾಯಕರಿಗೆ, ಸದಸ್ಯರಿಗೆ ಸಂವಿಧಾನದ ಅಚ್ಚನ್ನು ನಾವು ಇವತ್ತು ಏನು ಐತಿಹಾಸಿಕವಾಗಿ ಕೊಟ್ಟಿದ್ದೇವೆ, ಇದರಿಂದ ಜನತಂತ್ರಕ್ಕೆ ಸಂವಿಧಾನ ಬದ್ಧವಾಗಿ ಕೊಡತಕ್ಕ ಹಕ್ಕಿಗೆ, ನೀತಿಗೆ, ಪ್ರಜಾಪ್ರಭುತ್ವಕ್ಕೆ ವಿರೋಧವನ್ನು ವ್ಯಕ್ತಪಡಿಸಿ ಹೊರಗೆ ಹೋಗಿರತಕ್ಕದ್ದು ನಾಚಿಕೆಗೇಡು. ಅಡಳಿತ ವಿಕೇಂದ್ರಿಕರಣಕ್ಕೆ ವಿರೋಧವಾದ ನೀತಿಯನ್ನು ತೋರಿಸುವುದರೊಂದಿಗೆ ಇವರ ಅಷಾಢಭೂತಿತನವನ್ನು ತೋರಿಸಿದ್ದಾರೆಂಬುದನ್ನು ಈ ನಾಡಿನ ಜನತೆ ತಿಳಿದುಕೊಳ್ಳಬೇಕು. ಸಂವಿಧಾನಕ್ಕೆ ಬೆಂಬಲವಿಲ್ಲದಿರತಕ್ಕ ಸ್ವೇಚ್ಛಾಚಾರದ ಪ್ರವೃತ್ತಿಯನ್ನು ಹೊಂದಿರುವವರು ಇವರು ಎಂಬುದನ್ನು ಸ್ಪಷ್ಟವಾಗಿ ತೋರಿಸಿಕೊಟ್ಟಿದ್ದಾರೆ. ಇದು ಪ್ರಜಾಪ್ರಭುತ್ವಕ್ಕೆ ಮಾಡಿರುವಂಥ ಅಪಮಾನ ಎಂದು ನಾನು ಖಂಡಿತವಾಗಿ ಹೇಳಬೇಕಾಗುತ್ತದೆ. ಸಂವಿಧಾನದ ಮೂಲಕ ರಾಜಕೀಯದ ಅಧಿಕಾರವನ್ನು ವಿಕೇಂದ್ರಿಕರಣ ಮಾಡುವ ಮೂಲಭೂತ ಪ್ರಜಾಪ್ರಭುತ್ವ ತತ್ತ್ವದಲ್ಲಿ ಇವರಿಗೆ ಯಾವುದೇ ವಿಶ್ವಾಸ ಇಲ್ಲವೆಂಬುದನ್ನು ಪ್ರತ್ಯಕ್ಷವಾಗಿ ಇವತ್ತು ತೋರಿಸಿಕೊಟ್ಟಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ:- ಅಧ್ಯಕ್ಷರೇ, ವಿಕೇಂದ್ರಿಕರಣ ಏನಿದೆ ಇದು ಕರ್ನಾಟಕದ ಜನತೆಯ ಜನ್ಮಸಿದ್ಧವಾದ ಹಕ್ಕು. ಇದು ಸರ್ಕಾರದ ಪವಿತ್ರವಾದಂಥ ಜವಾಬ್ದಾರಿಯಾಗಿದೆ. ತಾವು ಇದಕ್ಕೆ ಸಹಕಾರವನ್ನು ಕೊಟ್ಟರೂ ಸರಿ, ಕೊಡದಿದ್ದರೂ ಸರಿ, ನಮ್ಮ ಜವಾಬ್ದಾರಿಯನ್ನು ನಾವು ಸಂಪೂರ್ಣವಾಗಿ ನಿರ್ವಹಿಸುತ್ತೇವೆ.